ಸಾಕ್ಷಿಯನ್ನು ದಿಃ 17-11-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ. ವಾಯ್ ಡಿ ಟಿ ವಕೀಲರಿಂದಃ(ವಾದಿ ಪರವಾಗಿ)**

ನಾನು ಗದಗ ನಗರದ ಖಾನತೋಟ ರಹವಾಸಿ ಎಂದರೆ ಸರಿ. ವಾದಿ ಪ್ರತಿವಾದಿಯರಿಗೆ ನಮ್ಮ ಮನೆಯಿಂದ 2-3 ಕಿ.ಮೀ ದೂರ ಇದೆ. 9 ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ. ನನ್ನ ಹೆಂಡತಿ 1 ನೇ ಪ್ರತಿವಾದಿ ಕರಕಪ್ಪ ಮಗಳು ಎಂದರೆ ಸರಿ. ವಾದಿ ಪ್ರತಿವಾದಿಯರ ಮನೆಯಲ್ಲಿ 1 ನೇ ವಾದಿ ಯಲ್ಲಪ್ಪ ಮನೆ ಹಿರೆತನ ಮಾಡುತ್ತಿದ್ದ. ವಾದಿ ಪ್ರತಿವಾದಿಯರ ಮನೆಯಲ್ಲಿ ಒಕ್ಕಲುತನ ಮತ್ತು ಸಾಕಾಣಿಕೆ ಇತ್ತು ಎಂದರೆ ಸರಿ. 1 ನೇ ವಾದಿ ಯಲ್ಲಪ್ಪ ಕುರಿ ಕಾಯುತ್ತಿದ್ದ. 2 ನೇ ಪ್ರತಿವಾದಿ ಶೇಖಪ್ಪ ಒಕ್ಕಲುತನ ಮಾಡುತ್ತಿದ್ದ. ಕುರಿ ಮತ್ತು ಒಕ್ಕಲುತನದಿಂದ ಬರುವ ಆದಾಯವನ್ನು 1 ನೇ ಪ್ರತಿವಾದಿ ಕರಕಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ವಾದಿ ಯಲ್ಲಪ್ಪ ನೋಕೊಳ್ಳುತ್ತಿದ್ದ ಎಂದು ಹೇಳುತ್ತಾರೆ. 1 ನೇ ವಾದಿಯನ್ನು ಹೊರತುಪಡಿಸಿ ಕರಕಪ್ಪ ಉಳಿದ ಮಕ್ಕಳ ಮದುವೆಯನ್ನು ಪ್ರತಿವಾದಿ ನಂ.1 ಕರಪ್ಪ ಮಾಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ನೇ ಪ್ರತಿವಾದಿ ಹನಮಪ್ಪ ಮಾಡಿದ್ದಾನೆ ಎಂದು ಹೇಳುತ್ತಾರೆ. ಎಲ್ಲಾ ಮಕ್ಕಳ ಮದುವೆಯನ್ನು ಮತ್ತು ಕುಟುಂಬದ ಆಗು ಹೋಗುಗಳನ್ನು 1 ನೇ ಪ್ರತಿವಾದಿ ಕರಕಪ್ಪ ನೋಡಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ಸರ್ವೇ ನಂ.596 ಪ್ಲಾಟ್ ನಂ.57 ಖರೀದಿ ಮಾತುಕತೆ ಗದಗ ತಾಲೂಕು ಕಚೇರಿಯಲ್ಲಿ ಆಯಿತು. ಆ ಸಮಯದಲ್ಲಿ ಆಸ್ತಿ ಮಾಲೀಕ ನಿಂಗಪ್ಪ ಗೂಳನ್ನವರ ಖರೀದಿದಾರರಾದ ಗಿರಿಜವ್ವ, 1 ನೇ ಪ್ರತಿವಾದಿ, ನಾನು ಹಾಗೂ ನನ್ನ ತಮ್ಮ ಚೇತನ ಹಾಜರಿದ್ದೇವು. ರೂ.33 ಸಾವಿರಗಳಿಗೆ ಖರೀದಿಯಾಯಿತು. ಸದರಿ ಹಣವನ್ನು 1 ನೇ ಪ್ರತಿವಾದಿ ಕರಕಪ್ಪ ಮಾರಟಗಾರರಾದ ನಿಂಗಪ್ಪ ಗೂಳನ್ನವರ ಇವರಿಗೆ ನೀಡಿದರು. ವಾದಿ ನಂ.2 ಗಿರಿಜವ್ವ ಸಹ ಗದಗದಲ್ಲಿಯೇ ವಾಸವಾಗಿದ್ದಾಳೆ ಎಂದರೆ ಸರಿ. ವಾದಿ ತನ್ನ ಮದುವೆಯಾದಗಿನಿಂದ ತನ್ನ ಗಂಡನ ಮನೆಯಲ್ಲಿಯೇ ಇದ್ದಾಳೆ ಎಂದರೆ ಸರಿ. ಸದರಿ ಖರೀದಿ ರಖಂನ್ನು 1 ನೇ ಪ್ರತಿವಾದಿ ಕರಕಪ್ಪ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಿಡಿ:3 ಖರೀದಿ ಪತ್ರಕ್ಕೆ ನಾನು ಸಾಕ್ಷಿ ಸಹಿ ಮಾಡಿದ್ದೇನೆ. ಸದರಿ ಖರೀದಿ ಕಾಲಕ್ಕೆ 1 ನೇ ಪ್ರತಿವಾದಿ ಕರಕಪ್ಪ ಅಲ್ಲಿ ಹಾಜರಿರಲಿಲ್ಲ ಮತ್ತು ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ದಿ:15.02.2010 ರ ಖರೀದಿ ಪತ್ರ ನಿಡಿ:3 ಕ್ಕೆ ಕರಕಪ್ಪ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಸಹಿ ಮಾಡಿಲ್ಲ ಆದರೆ ಅವರೇ ಹಣ ಕೊಟ್ಟು ಮಗಳಿಗೆ ಆಸ್ತಿ ಕೊಡಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಖರೀದಿ ರಖಂನ್ನು 1 ನೇ ಪ್ರತಿವಾನಿ ಕರಕಪ್ಪ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿ ಗಿರಿಜವ್ವನ ಗಂಡ ಭೀಮಪ್ಪ ಗದಗ ಎ ಪಿ ಎಮ್ ಸಿ ಯಲ್ಲಿ ಚೀಲ ಹೊಲಿಯುವ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಅವರ ಮಕ್ಕಳೆಲ್ಲರೂ ಬೇರೆ ಬೇರೆ ಉದ್ಯೋಗ ಮಾಡುತ್ತಾರೆ ಎಂದರೆ ಗೊತ್ತಿಲ್ಲ. 2 ನೇ ವಾದಿ ಗಿರಿಜವ್ವ ಸುತ್ತ-ಮುತ್ತ ನಾಲ್ಕಾರು ಮನೆಗಳಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿ ಗಿರಿಜವ್ವ ಮತ್ತು ಆಕೆಯ ಗಂಡ ಮತ್ತು ಮಕ್ಕಳು ದುಡಿದು ಗಳಿಸಿದ ಹಣದಲ್ಲಿ ಸದರಿ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಗಿರಿಜವ್ವನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವುದೇ ಹಣ ಪಡೆಯದೇ ತನ್ನ ಆಸ್ತಿಯನ್ನು 2 ನೇ ವಾದಿಗೆ ಖರೀದಿ ಹಾಕಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಆ ರೀತಿ ಹಣ ಪಡೆಯದೇ ಖರೀದಿ ನೀಡುತ್ತಿರುವುದಾಗಿ ಖರೀದಿ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. 2 ನೇ ವಾದಿ ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯಿಂದ ರೂ.2 ಲಕ್ಷ 20 ಸಾವಿರ ಹಣ ನೀಡಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಹಾಗಾಗಿ ಎರಡೂ ಆಸ್ತಿಗಳು 2 ನೇ ವಾದಿ ಗಿರಿಜವ್ವ ಹಾಗೂ ಆಕೆಯ ಗಂಡ ಮಕ್ಕಳ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. 2 ನೇ ವಾದಿಗೆ ಮನೆ ಕಟ್ಟಲು 1 ನೇ ಪ್ರತಿವಾದಿ ಹಣ ನೀಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಪಾಲು ಕೊಡಬಾರದೆನ್ನುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,ಗದಗ.